ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ
ವಿಶ್ವವಿದ್ಯಾಲಯ ಬೀದರ - 585401

ಭಾ.ಕೃ.ಅ.ಪ.-ಕೃಷಿ ವಿಜ್ಞಾನ ಕೇಂದ್ರ, ದ.ಕ. ಕಂಕನಾಡಿ, ಮಂಗಳೂರು-575002

# ಚರ್ಮಗಂಟು ರೋಗ - ಮಾಹಿತಿ ಕೈಪಿಡಿ

(ರೈತರು ಮತ್ತು ಪಶು ವೈದ್ಯಕೀಯ ವೃತ್ತಿಪರರಿಗೆ ಸಂಕ್ಷಿಪ್ತ ಮಾಹಿತಿ)



ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ
ಮೀನುಗಾರಿಕಾ ಕಾಲೇಜು ಆವರಣ, ಎಕ್ಕೂರು, ಕಂಕನಾಡಿ ಅಂಚೆ,
ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ–575002

**July 2026**

Scanned with OKEN Scanner

# ಚರ್ಮಗಂಟು ರೋಗ - ಮಾಹಿತಿ ಕೈಪಿಡಿ

## ತಾಂತ್ರಿಕ ಮಾಹಿತಿ:


**ಡಾ. ಧರಣೇಶ ಎನ್.ಕೆ.,**
ಸಹ ಪ್ರಾಧ್ಯಾಪಕರು (ಪಶುವೈದ್ಯಕೀಯ ವಿಜ್ಞಾನ)
ಕೃಷಿ ವಿಜ್ಞಾನ ಕೇಂದ್ರ, ದ.ಕ. ಮಂಗಳೂರು

**ಡಾ. ಟಿ.ಜೆ. ರಮೇಶ**
ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು
ಕೃಷಿ ವಿಜ್ಞಾನ ಕೇಂದ್ರ, ದ.ಕ. ಮಂಗಳೂರು

**ಡಾ. ರಶ್ಮಿ ಕೆ.ಎಂ.,**
ಸಹಾಯಕ ಪ್ರಾಧ್ಯಾಪಕರು,
ಜಾನುವಾರು ಸಂಕೀರ್ಣ ವಿಭಾಗ,
ಪಶುವೈದ್ಯಕೀಯ ಮಹಾವಿದ್ಯಾಲಯ ಕ್ಯೊಲ,
ಕಡಬ ತಾಲ್ಲೂಕು, ದ.ಕ.ಜಿಲ್ಲೆ –574241

**ಡಾ. ಹರೀಶ ಶೆಣೈ**
ಸಹಾಯಕ ಪ್ರಾಧ್ಯಾಪಕರು (ಬೇಸಾಯ ಶಾಸ್ತ್ರ)

**ಡಾ. ಕೇಧಾರನಾಥ**
ವಿಜ್ಞಾನಿಗಳು (ಸಸ್ಯ ಸಂರಕ್ಷಣೆ)

**ಡಾ. ಮಲ್ಲಿಕಾರ್ಜುನ ಎಲ್**
ವಿಜ್ಞಾನಿಗಳು (ಮಣ್ಣು ವಿಜ್ಞಾನ)

**ಡಾ. ರಶ್ಮಿ ಆರ್.**
ವಿಜ್ಞಾನಿಗಳು (ತೋಟಗಾರಿಕೆ)

**ಡಾ. ಕುಮಾರ್ ರಾಠೋಡ್**
ಸಹಾಯಕ ಪ್ರಾಧ್ಯಾಪಕರು (ಮೀನುಗಾರಿಕೆ)


Scanned with OKEN Scanner

# ಚರ್ಮಗಂಟು ರೋಗ (Lumpy Skin Disease - LSD)

## ಪರಿಚಯ

ಚರ್ಮಗಂಟು ರೋಗ (Lumpy Skin Disease - LSD) ಎಂಬುದು ದನಗಳಲ್ಲಿ ಕಾಣಿಸಿಕೊಳ್ಳುವ ಮಹತ್ವದ ವೈರಲ್ ಸಾಂಕ್ರಾಮಿಕ ರೋಗವಾಗಿದೆ. ಇದು Capripoxvirus ಗುಂಪಿಗೆ ಸೇರಿದ ವೈರಸ್ (ನಂಜಾಣು)ನಿಂದ ಉಂಟಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಭಾರತ ಸೇರಿದಂತೆ ಅನೇಕ ದೇಶಗಳಲ್ಲಿ ಈ ರೋಗವು ವೇಗವಾಗಿ ಹರಡುತ್ತಿದ್ದು, ಪಶುಸಂಗೋಪನಾ ಕ್ಷೇತ್ರಕ್ಕೆ ಆರ್ಥಿಕ ನಷ್ಟವನ್ನುಂಟುಮಾಡುತ್ತಿದೆ. ಹಾಲು ಉತ್ಪಾದನೆ ಕುಸಿತ, ದೇಹದ ತೂಕ ಇಳಿಕೆ, ಸಂತಾನೋತ್ಪತ್ತಿ ಸಮಸ್ಯೆಗಳು ಹಾಗೂ ಕೆಲವು ಸಂದರ್ಭಗಳಲ್ಲಿ ಮರಣವೂ ಸಂಭವಿಸಬಹುದು.

ಈ ರೋಗವು ಪ್ರಮುಖವಾಗಿ ದನ ಮತ್ತು ಎಮ್ಮೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಮಾನವರಿಗೆ ಈ ರೋಗ ತಗಲುವುದಿಲ್ಲ ಎಂಬುದು ಗಮನಾರ್ಹ.

## ಆತಿಥೇಯ ಪ್ರಾಣಿಗಳು (Host Involved)

- ದೇಶೀ ಮತ್ತು ಸಂಕರಣ (Crossbreed) ದನಗಳು
- ಎಮ್ಮೆ
- ಕರುಗಳು ಹೆಚ್ಚು ಸಂವೇದನಾಶೀಲ (Susceptible)
- ಕೆಲವು ಕಾಡು ಜಾನುವಾರುಗಳಲ್ಲಿ ಕೂಡ ವರದಿಯಾಗಿದೆ
  ಸಂಕರ ತಳಿಯ ಹಾಲು ಉತ್ಪಾದಕ ದನಗಳಲ್ಲಿ ರೋಗದ ತೀವ್ರತೆ ಹೆಚ್ಚು ಕಂಡುಬರುತ್ತದೆ.

## ರೋಗ ಹರಡುವಿಕೆ (Transmission)

ಈ ರೋಗವು ಮುಖ್ಯವಾಗಿ ರಕ್ತ ಹೀರುವ ಕೀಟಗಳ ಮೂಲಕ ಹರಡುತ್ತದೆ.


**ಪ್ರಮುಖ ವಾಹಕಗಳು/ ಹರಡುವ ಮಾರ್ಗಗಳು**

- ಸೊಳ್ಳೆಗಳು
- ಈಗೆಗಳು
- ಹುಳು/ಟಿಕ್ (ಉಣ್ಣೆ)ಗಳು
- ಸೋಂಕಿತ ಪ್ರಾಣಿಯ ನೇರ ಸಂಪರ್ಕ
- ಸೋಂಕಿತ ಆಹಾರ ಮತ್ತು ನೀರು
- ಕೃತಕ ಗರ್ಭಧಾರಣೆ ವೇಳೆ ಸೋಂಕಿತ ವೀರ್ಯ

ಮಳೆಗಾಲ ಮತ್ತು ಆರ್ದ್ರ/ ತೇವಭರಿತ (Humidity/Dampness) ವಾತಾವರಣದಲ್ಲಿ ಕೀಟಗಳ ಸಂಖ್ಯೆ ಹೆಚ್ಚಾಗುವುದರಿಂದ ರೋಗದ ಹರಡುವಿಕೆ ವೇಗವಾಗಿರುತ್ತದೆ.



Scanned with OKEN Scanner




Scanned with OKEN Scanner

**ರೋಗವಿಜ್ಞಾನ (Epidemiology)**

- ಬೇಸಿಗೆ ಮತ್ತು ಮಳೆಗಾಲದಲ್ಲಿ ಹೆಚ್ಚಾಗಿ ಕಂಡುಬರುತ್ತದೆ
- ಪಶುಗಳ ಹೆಚ್ಚಿನ ಸಂಚಾರ ಇರುವ ಪ್ರದೇಶಗಳಲ್ಲಿ ವೇಗವಾಗಿ ಹರಡುತ್ತದೆ
- ಜಾನುವಾರು ಮಾರುಕಟ್ಟೆಗಳು, ಜಾತ್ರೆಗಳು ಮತ್ತು ಸಾಮೂಹಿಕ ಮೇಯಿಸುವಿಕೆ ರೋಗ ಹರಡುವಿಕೆಗೆ ಕಾರಣವಾಗಬಹುದು
- ರೋಗಬಾಧಿತ ಪ್ರದೇಶಗಳಲ್ಲಿ ಮರಣ ಪ್ರಮಾಣ ಸಾಮಾನ್ಯವಾಗಿ ಕಡಿಮೆ ಇದ್ದರೂ, ಉತ್ಪಾದನಾ ನಷ್ಟ ಬಹಳ ಹೆಚ್ಚಿರುತ್ತದೆ

**ಆರ್ಥಿಕ ಪರಿಣಾಮ**

- ಹಾಲು ಉತ್ಪಾದನೆ ಕುಸಿತ
- ಗರ್ಭಪಾತ
- ಚರ್ಮದ ಹಾನಿ
- ಬೆಳವಣಿಗೆ ಕುಂಠಿತ
- ವ್ಯಾಪಾರ ನಿರ್ಬಂಧಗಳು

**ರೋಗ ಲಕ್ಷಣಗಳು (Clinical Signs)**

**ಸಾಮಾನ್ಯ ಲಕ್ಷಣಗಳು**

- ಹೆಚ್ಚು ಜ್ವರ • (104°F–106°F)
- ಆಹಾರ ತಿನ್ನದೆ ಇರುವುದು
- ನಿರುತ್ಸಾಹ
- ಕಣ್ಣು ಮತ್ತು ಮೂಗಿನಿಂದ ಸ್ರಾವ
- ಲಿಂಫ್ ಗ್ರಂಥಿಗಳ ಉಬ್ಬರ

**ವಿಶಿಷ್ಟ ಲಕ್ಷಣಗಳು**

- ದೇಹದಾದ್ಯಂತ ಗಟ್ಟಿಯಾದ ಗಂಟುಗಳು (nodules)
- ಗಂಟುಗಳು ಕುತ್ತಿಗೆ, ಬೆನ್ನು, ಕಾಲು, ಸ್ತನ ಮತ್ತು ಮುಖದಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತವೆ
- ಚರ್ಮದಲ್ಲಿ ಗಾಯ ಮತ್ತು ಪೆಟ್ಟುಗಳು
- ಕಾಲುಗಳಲ್ಲಿ ಊತ ಹಾಗೂ ಕುಂಟುತ್ತ ನಡೆಯುವುದು
- ಹಾಲು ಉತ್ಪಾದನೆ ತೀವ್ರವಾಗಿ ಕಡಿಮೆಯಾಗುವುದು
- ಕೆಲವೊಮ್ಮೆ ನ್ಯುಮೋನಿಯಾ ಮತ್ತು ಗರ್ಭಪಾತ

ಕರುಗಳಲ್ಲಿ ರೋಗ ತೀವ್ರವಾಗಿರಬಹುದು.




Scanned with OKEN Scanner

# ರೋಗಬಾಧಿತ ಮತ್ತು ಆರೋಗ್ಯಕರ ದನದ ಹೋಲಿಕೆ

## ಚರ್ಮಗಂಟು ರೋಗ (LSD)

**ಆರೋಗ್ಯಕರ ದನ** | **ರೋಗಬಾಧಿತ ದನ (LSD)**




| ಆರೋಗ್ಯಕರ ದನ | | ರೋಗಬಾಧಿತ ದನ (LSD) |
|---|---|---|
| ಹಸಿವಿನಿಂದ ಆಹಾರವನ್ನು ತಿನ್ನುತ್ತದೆ | ಆಹಾರ ಸೇವನೆ | ಆಹಾರ ತಿನ್ನುವುದಿಲ್ಲ, ಹಸಿವು ಕಡಿಮೆ |
| ದೇಹದ ತಾಪಮಾನ ಸಾಮಾನ್ಯ (101°F–102.5°F) | ದೇಹದ ತಾಪಮಾನ | ಹೆಚ್ಚು ಜ್ವರ (104°F–106°F) |
| ಚರ್ಮದಲ್ಲಿ ಸಾಮಾನ್ಯವಾಗಿ ಗಂಟುಗಳಿರುವುದಿಲ್ಲ | ಚರ್ಮ | ದೇಹದಾದ್ಯಂತ ಗಂಟುಗಳು (ಗಡ್ಡೆಗಳು) |
| ಕಣ್ಣುಗಳು ಸ್ವಚ್ಛ ಮತ್ತು ಚುರುಕಾಗಿರುತ್ತವೆ | ಕಣ್ಣು | ಕಣ್ಣಿನಿಂದ ನೀರು/ಸ್ರಾವ ಬರುತ್ತದೆ |
| ಮೂಗು ಸ್ವಚ್ಛ ಮತ್ತು ತೇವವಾಗಿರುತ್ತದೆ | ಮೂಗು | ಮೂಗಿನಿಂದ ಸ್ರಾವ (ನೀರು/ಚೀಮು) |
| ಕಾಲುಗಳು ಸಾಮಾನ್ಯ ಕುಂಟುವುದಿಲ್ಲ | ಕಾಲುಗಳು | ಕಾಲುಗಳಲ್ಲಿ ಊತ, ಕುಂಟಿತ |
| ಹಾಲು ಉತ್ಪಾದನೆ ಉತ್ತಮ | ಹಾಲು ಉತ್ಪಾದನೆ | ಹಾಲು ಉತ್ಪಾದನೆ ತೀವ್ರವಾಗಿ ಕಡಿಮೆಯಾಗುತ್ತದೆ |
| ಉತ್ಸಾಹಕದಿಂದ ಚುರುಕಾಗಿರುತ್ತದೆ | ವರ್ತನೆ | ನಿಶಕ್ತ, ದುರ್ಬಲ, ನಿಂತಿರಲು ಇಷ್ಟಪಡುವುದಿಲ್ಲ |

**ರೈತರಿಗೆ ಸಲಹೆ**

- ಗಂಟುಗಳು ಕಂಡುಬಂದ ತಕ್ಷಣ ಪಶುವೈದ್ಯರನ್ನು ಸಂಪರ್ಕಿಸಿ
- ಸೋಂಕಿತ ದನಗಳನ್ನು ಬೇರೆಡೆ ಸಾಗಿಸಬೇಡಿ
- ಕೀಟ ನಿಯಂತ್ರಣ ಮಾಡಿ
- ಸಮರ್ಪಕ ಲಸಿಕೆ ಹಾಕಿಸಿ

Scanned with OKEN Scanner



ಹಳ್ಳಿಕಾರ್ ಎತ್ತಿನಲ್ಲಿ ದೇಹದಾದ್ಯಂತ ಚರ್ಮದಲ್ಲಿ ಗಟ್ಟಿಯಾದ ಗಂಟುಗಳು



ಮಿಶ್ರ ತಳಿಯ ಹಸುವಿನಲ್ಲಿ ದೇಹದಾದ್ಯಂತ ಚರ್ಮದಲ್ಲಿ ಗಟ್ಟಿಯಾದ ಗಂಟುಗಳು

## ಸ್ಥೂಲ ರೋಗಪರಿಣಾಮಗಳು (Gross Pathology)

**ಮರಣೋತ್ತರ ಪರೀಕ್ಷೆಯಲ್ಲಿ ಕಂಡುಬರುವ ಪ್ರಮುಖ ಬದಲಾವಣೆಗಳು:**

- ಚರ್ಮದ ಮೇಲೆ ಗಟ್ಟಿಯಾದ ಗಂಟುಗಳು
- ಗಂಟುಗಳ ಮಧ್ಯಭಾಗದಲ್ಲಿ ನೆಕ್ರೋಸಿಸ್ (ಕಣಜ ಸಾವು)
- ಚರ್ಮದ ಅಡಿಭಾಗದಲ್ಲಿ ಊತ
- ಶ್ವಾಸಕೋಶದಲ್ಲಿ ಉರಿಯೂತ
- ಲಿಂಫ್ ಗ್ರಂಥಿಗಳ ಉಬ್ಬರ
- ಬಾಯಿಯ ಒಳಭಾಗದಲ್ಲಿ ಗಾಯಗಳು
- ಕೆಲವು ಸಂದರ್ಭಗಳಲ್ಲಿ ಸ್ನಾಯುಗಳಲ್ಲಿ ರಕ್ತಸ್ರಾವ



ಪಶುವೈದ್ಯರಿಂದ ರೋಗಬಾಧಿತ ಹಸುವಿನ ಪರಿಶೀಲನೆ

## ರೋಗ ನಿರ್ಣಯ (Disease Diagnosis)

**ಕ್ಷೇತ್ರಮಟ್ಟದ ನಿರ್ಣಯ**

- ಜ್ವರ ಮತ್ತು ಚರ್ಮದ ಗಂಟುಗಳ ಆಧಾರದ ಮೇಲೆ ಶಂಕಿಸಬಹುದು

**ಪ್ರಯೋಗಾಲಯ ಪರೀಕ್ಷೆಗಳು**

- ಪಿ.ಸಿ.ಆರ್. (PCR) ಪರೀಕ್ಷೆ
- ವೈರಸ್ ಐಸೋಲೇಷನ್
- ಎಲೈಸ (ELISA)
- ಹಿಸ್ಟೋಪಥಾಲಜಿ ಪರೀಕ್ಷೆ

## ಭೇದಾತ್ಮಕ ರೋಗ ನಿರ್ಣಯ (Differential Diagnosis)

- ಕಾಲು ಮತ್ತು ಬಾಯಿ ರೋಗ (FMD)
- ಹುಸಿ ಚರ್ಮಗಂಟು ರೋಗ (Pseudo Lumpy Skin Disease)
- ಡರ್ಮಟೊಫಿಲೋಸಿಸ್ (Dermatophilosis)
- ಕೀಟ ಕಚ್ಚುವಿಕೆಯಿಂದ ಉಂಟಾಗುವ ಅತಿಸ್ಪಂದನಶೀಲತೆ (Insect Bite Hypersensitivity)



Scanned with OKEN Scanner

ರೋಗಬಾಧಿತ ಹಸುಗಳಿಂದ ಪರೀಕ್ಷೆಗಾಗಿ ರಕ್ತ ಮಾದರಿ ಸಂಗ್ರಹಣೆ






ಚರ್ಮಗಂಟು ಗಾಯಗಳಿಂದ ಪರೀಕ್ಷೆಗಾಗಿ ಮಾದರಿ ಸಂಗ್ರಹಣೆ



Scanned with OKEN Scanner

## ಚಿಕಿತ್ಸೆ (Treatment)

ಈ ರೋಗಕ್ಕೆ ನಿರ್ದಿಷ್ಟ ವೈರಸ್ ವಿರೋಧಿ ಚಿಕಿತ್ಸೆ ಇಲ್ಲ. ಚಿಕಿತ್ಸೆ ಮುಖ್ಯವಾಗಿ ಲಕ್ಷಣಾಧಾರಿತವಾಗಿರುತ್ತದೆ.

**ಚಿಕಿತ್ಸೆ ಕ್ರಮಗಳು**

- ದ್ವಿತೀಯಕ ಬ್ಯಾಕ್ಟೀರಿಯಾ ಸೋಂಕು ತಡೆಯಲು ಆಂಟಿಬಯೋಟಿಕ್ಸ್
- ಜ್ವರ ಕಡಿಮೆ ಮಾಡಲು NSAIDs
- ಆಂಟಿಹಿಸ್ಟಮಿನ್‌ಗಳು
- ವಿಟಮಿನ್ ಮತ್ತು ಖನಿಜ ಪೂರಕಗಳು
- ಗಾಯಗಳಿಗೆ ಆಂಟಿಸೆಪ್ಟಿಕ್ ಮುಲಾಮು
- ದ್ರವ ಚಿಕಿತ್ಸೆ (Fluid therapy) ಅಗತ್ಯವಿದ್ದಲ್ಲಿ

**ನಿರ್ವಹಣಾ ಕ್ರಮಗಳು**

- ರೋಗಬಾಧಿತ ಪ್ರಾಣಿಗಳನ್ನು ಪ್ರತ್ಯೇಕಿಸಬೇಕು
- ಸ್ವಚ್ಛ ನೀರು ಮತ್ತು ಪೌಷ್ಟಿಕ ಆಹಾರ ಒದಗಿಸಬೇಕು
- ಕೀಟ ನಿಯಂತ್ರಣ ಅತ್ಯಗತ್ಯ

## ತಡೆಗಟ್ಟುವಿಕೆ ಮತ್ತು ನಿಯಂತ್ರಣ (Prevention and Control)

**ಲಸಿಕೆ**

**ಈ ರೋಗ ನಿಯಂತ್ರಣದ ಅತ್ಯಂತ ಪರಿಣಾಮಕಾರಿ ವಿಧಾನ ಲಸಿಕಾಕರಣವಾಗಿದೆ.**

- ಸರ್ಕಾರದ ಮಾರ್ಗಸೂಚಿಯಂತೆ ಲಸಿಕೆ ಹಾಕಿಸಬೇಕು
- ಎಲ್ಲಾ ಆರೋಗ್ಯಕರ ಪಶುಗಳಿಗೆ ಸಮಯಕ್ಕೆ ಸರಿಯಾಗಿ ಲಸಿಕೆ ನೀಡಬೇಕು

**ಜೈವಿಕ ಭದ್ರತಾ ಕ್ರಮಗಳು**

- ಹೊಸದಾಗಿ ಖರೀದಿಸಿದ ಪಶುಗಳನ್ನು ಪ್ರತ್ಯೇಕವಾಗಿಡಬೇಕು
- ಪಶು ಶೆಡ್‌ಗಳನ್ನು ಸ್ವಚ್ಛವಾಗಿಡಬೇಕು
- ಕೀಟನಾಶಕ ಸಿಂಪಡಣೆ ಮಾಡಬೇಕು
- ಸೋಂಕಿತ ಪ್ರಾಣಿಗಳ ಸಂಚಾರವನ್ನು ತಡೆಯಬೇಕು

**ರೈತರಿಗೆ ಸಲಹೆಗಳು**

- ಚರ್ಮದಲ್ಲಿ ಗಂಟುಗಳು ಕಂಡುಬಂದ ತಕ್ಷಣ ಪಶುವೈದ್ಯರನ್ನು ಸಂಪರ್ಕಿಸಬೇಕು
- ಸ್ವಯಂ ಚಿಕಿತ್ಸೆ ಮಾಡಬಾರದು
- ಸತ್ತ ಪ್ರಾಣಿಗಳನ್ನು ಸುರಕ್ಷಿತವಾಗಿ ವಿಲೇವಾರಿ ಮಾಡಬೇಕು

ಚರ್ಮಗಂಟು ರೋಗವು ಪಶುಸಂಗೋಪನಾ ಕ್ಷೇತ್ರಕ್ಕೆ ದೊಡ್ಡ ಸವಾಲಾಗಿದ್ದು, ರೈತರು ಮತ್ತು ಪಶುವೈದ್ಯಕೀಯ ಸಿಬ್ಬಂದಿ ಜಾಗೃತಿಯಿಂದ ಕಾರ್ಯನಿರ್ವಹಿಸಿದರೆ ಇದರ ಪರಿಣಾಮವನ್ನು ಬಹಳ ಮಟ್ಟಿಗೆ ಕಡಿಮೆ ಮಾಡಬಹುದು. ಸಮಯೋಚಿತ ಲಸಿಕಾಕರಣ, ಕೀಟ ನಿಯಂತ್ರಣ, ಮತ್ತು ಶೀಘ್ರ ನಿರ್ಣಯವು ರೋಗ ನಿಯಂತ್ರಣದ ಪ್ರಮುಖ ಅಂಶಗಳಾಗಿವೆ. ರೈತರು ಪಶುವೈದ್ಯರ ಸಲಹೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಅತ್ಯಗತ್ಯ.

• • • • • • • • • •




Scanned with OKEN Scanner

# ಚರ್ಮಗಂಟು ರೋಗ (LSD)

## ತಡೆಗಟ್ಟುವಿಕೆ ಮತ್ತು ನಿಯಂತ್ರಣ – ಹಂತ ಹಂತದ ಮಾರ್ಗದರ್ಶನ

### ಉದ್ದೇಶ

LSD ರೋಗದ ಹರಡುವಿಕೆಯನ್ನು ತಡೆಹಿಡಿಯುವುದು, ಪಶುಗಳ ಆರೋಗ್ಯವನ್ನು ಕಾಪಾಡುವುದು ಹಾಗೂ ಆರ್ಥಿಕ ನಷ್ಟವನ್ನು ಕಡಿಮೆಮಾಡುವುದು





### 1. ಲಸಿಕಾಕರಣ




- ಸರ್ಕಾರದ ಮಾರ್ಗಸೂಚಿಯಂತೆ ಎಲ್ಲಾ ಆರೋಗ್ಯಕರ ಪಶುಗಳಿಗೆ ಸಮಯಕ್ಕೆ ಸರಿಯಾಗಿ ಲಸಿಕೆ ಹಾಕಿ.
- ಮೊದಲ ಡೋಸ್ ಹಾಗೂ ಬೂಸ್ಟರ್ ಡೋಸ್ ಪೂರ್ಣಗೊಳಿಸಿ..
- ಕರುಗಳಿಗೆ ಸರಿಯಾದ ವಯಸ್ಸಿನಲ್ಲಿ ಲಸಿಕೆ ನೀಡಿರಿ.

### 2. ಕೀಟ ನಿಯಂತ್ರಣ



ಸೊಳ್ಳೆ, ಈಗ, ಉಣ್ಣಿ ನಿಯಂತ್ರಣ ಮಾಡಿ.

ಶೆಡ್ ಹಾಗೂ ಸುತ್ತಮುತ್ತಲಿನ ಸ್ಥಳಗಳಲ್ಲಿ ಕೀಟನಾಶಕ ಸಿಂಪಡಣೆ ಮಾಡಿ.


ನೀರು ನಿಲ್ಲುವ ಪ್ರದೇಶಗಳನ್ನು ನಿವಾರಿಸಿ.

### 3.ಶೆಡ್ ಸ್ವಚ್ಛತೆ ಮತ್ತು ನಿರ್ವಹಣೆ



- ಶೆಡ್‌ಗಳನ್ನು ಸ್ವಚ್ಛವಾಗಿಡಿ.
- ಕಸವನ್ನು ನಿಯಮಿತವಾಗಿ ತೆಗೆಯಿರಿ.
- ಪಶುಗಳಿಗೆ ಶುದ್ಧ ನೀರು ಮತ್ತು ಪೌಷ್ಟಿಕ ಆಹಾರ ಒದಗಿಸಿ.

### 4. ಜೈವಿಕ ಭದ್ರತೆ





ಹೊಸದಾಗಿ ಖರೀದಿಸಿದ ಪಶುಗಳನ್ನು ಕನಿಷ್ಠ 21 ದಿನ ಪ್ರತ್ಯೇಕವಾಗಿ ಇಡಿ.

ಅನಾವಶ್ಯಕ ವ್ಯಕ್ತಿಗಳು/ವಾಹನಗಳ ಪ್ರವೇಶವನ್ನು ನಿಯಂತ್ರಿಸಿ.

ಮಾರುಕಟ್ಟೆ, ಜಾತ್ರೆ ಹಾಗೂ ಪ್ರದರ್ಶನಗಳಿಗೆ ಪಶುಗಳನ್ನು ಕರೆದೊಯ್ಯಬೇಡಿ.

### 5. ತ್ವರಿತ ರೋಗ ಗುರುತಿಸುವಿಕೆ ಮತ್ತು ಮಾಹಿತಿ



ಚರ್ಮದಲ್ಲಿ ಗಂಟು, ಜ್ವರ, ಆಹಾರ ಇಚ್ಛೆ ಕಡಿಮೆಯಾದರೆ ತಕ್ಷಣ ಪಶುವೈದ್ಯರನ್ನು ಸಂಪರ್ಕಿಸಿ.

ಪಶುವೈದ್ಯರಿಗೆ ಸರಿಯಾದ ಮಾಹಿತಿ ನೀಡಿ.

ಶಂಕಿತ/ಬಾಧಿತ ಪಶುಗಳನ್ನು ಪ್ರತ್ಯೇಕಿಸಿ.

### 6. ರೋಗ ಹರಡುವಿಕೆ ತಡೆಯಿರಿ



ಬಾಧಿತ ಪ್ರದೇಶದಿಂದ ಆರೋಗ್ಯಕರ ಪ್ರದೇಶಕ್ಕೆ ಪಶುಗಳ ಸಂಚಾರವನ್ನು ತಡೆಯಿರಿ.

ಸೋಂಕಿತ ಬಟ್ಟೆ, ಉಪಕರಣ ಹಾಗೂ ಇತರೆ ವಸ್ತುಗಳನ್ನು ಹಂಚಿಕೊಳ್ಳಬೇಡಿ.

### 7. ರೋಗಬಾಧಿತ ಪಶುಗಳ ನಿರ್ವಹಣೆ



ಬಾಧಿತ ಪಶುಗಳಿಗೆ ಪಶುವೈದ್ಯರ ಸಲಹೆಯಂತೆ ಚಿಕಿತ್ಸೆ ನೀಡಿ

ದ್ವಿತೀಯ ಸೋಂಕನ್ನು ತಡೆಯಿರಿ, ಪೌಷ್ಟಿಕ ಆಹಾರ ನೀಡಿ.

ಚೇತರಿಸಿಕೊಳ್ಳುವವರೆಗೆ ಪ್ರತ್ಯೇಕವಾಗಿ ಇಡಿ.



### 8. ಮರಣಹೊಂದಿದ ಪಶುಗಳ ಸುರಕ್ಷಿತ ವಿಲೇವಾರಿ



ಸತ್ತ ಪಶುಗಳನ್ನು ಸುರಕ್ಷಿತವಾಗಿ ವಿಲೇವಾರಿ ಮಾಡಿ (ಆಳವಾಗಿ ಹೂಳು/ಸುಡು).

ವಿಲೇವಾರಿ ನಂತರ ಸ್ಥಳವನ್ನು ಕೀಟನಾಶಕ/ಜೈವಾಣುನಾಶಕ ಬಳಸಿ ಸ್ವಚ್ಛಗೊಳಿಸಿ.

### ಫಲಿತಾಂಶ

- ರೋಗ ನಿಯಂತ್ರಣ
- ಪಶುಗಳ ಆರೋಗ್ಯ ರಕ್ಷಣೆ
- ಹಾಲು ಉತ್ಪಾದನೆ ಉಳಿಕೆ
- ಆರ್ಥಿಕ ನಷ್ಟ ಕಡಿಮೆ

**ಜಾಗೃತಿ – ಮುಂಚಿತ ಕ್ರಮ – ಆರೋಗ್ಯಕರ ಪಶುಗಳು – ಸಮೃದ್ಧ ಭವಿಷ್ಯ**

**ಸಮಸ್ಯೆ ಕಂಡುಬಂದರೆ ತಕ್ಷಣ ಹತ್ತಿರದ ಪಶುವೈದ್ಯರನ್ನು ಸಂಪರ್ಕಿಸಿ.**

Scanned with OKEN Scanner



ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ
ಮೀನುಗಾರಿಕಾ ಕಾಲೇಜು ಆವರಣ,
ಎಕ್ಕೂರು, ಕಂಕನಾಡಿ ಅಂಚೆ, ಮಂಗಳೂರು,
ದಕ್ಷಿಣ ಕನ್ನಡ ಜಿಲ್ಲೆ–575002

ICAR - KRISHI VIGYAN KENDRA
Dakshina Kannada District
Kankanady,
Mangalore - 575 002
Karnataka

www.kvkdk.org kvkdk@rediffmail.com Ph: 0824 2431872

Scanned with OKEN Scanner